**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 86/2023 |
| ಸಿ.ಡಬ್ಲ್ಯೂ | 2 |
| ಪಿ.ಡಬ್ಲ್ಯೂ | 3 |

| | | |
|---|---|---|
| ಹೆಸರು | :- | ಲೋಕಣ್ಣ ನಾವಿ |
| ತಂದೆ/ಗಂಡನ ಹೆಸರು | :- | ಬಸಪ್ಪ |
| ವಯಸ್ಸು | :- | 29 ವರ್ಷ |
| ಉದ್ಯೋಗ | :- | ಖಾಸಗಿ ಕೆಲಸ |
| ವಾಸಸ್ಥಳ | :- | ಕೂಡಗಿ |

ಸಾಕ್ಷಿಯನ್ನು ದಿಃ19.09.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ**

1. ಸಾಕ್ಷಿಗೆ ಈಗ ನಿಪಿ-2 ತೋರಿಸುತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ರ ಮೇಲೆ ಪೊಲೀಸರು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ. ನಿಪಿ-2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸುವುದಿಲ್ಲ. ಸಾಕ್ಷಿಗೆ ಈಗ ಮುಮಾ-1 ಮತ್ತು ಮುಮಾ-2 ನ್ನು ತೋರಿಸುತ್ತಿದ್ದು, ಅವುಗಳನ್ನು ಅವರು ಗುರುತಿಸುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಣಿಸಿ ಮಾನ್ಯ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದರಿಂದ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)**

**ಪಾಟೀ ಸವಾಲು :ಸ.ಸ.ಅ ರವರಿಂದ**

1. ದಿಃ27.09.2022 ರಂದು ಸಂಜೆ 6-00 ಗಂಟೆಗೆ ನೀವು ಮತ್ತು ಚಾಸಾ-3 ರವರು ಲೋಕಾಪೂರದ ದುರ್ಗಾದೇವಿ ದೇವಸ್ಥಾನ ಹತ್ತಿರ ನಿಂತುಕೊಂಡಾಗ ಚಾಸಾ-4 ರವರು ಬಂದು ಪಂಚರಾಗಲು ಕೇಳಿಕೊಂಡರು, ಆಗ ನಾವು ಒಪ್ಪಿಕೊಂಡು ಹೋದೆವು ಎಂದರೆ ಸರಿಯಲ್ಲ. ಚಾಸಾ-1 ರವರು ನಮಗೆ ದಾಳಿಯ ವಿಷಯ ತಿಳಿಸಿ ಲೋಕಾಪೂರದ ಚಿಕ್ಕೂರ ಎಲ್.ಟಿಯ ಎರಡು ಕ್ರಾಸ ಹತ್ತಿರ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅಲ್ಲಿ ಆರೋಪಿತ ಕೈಚೀಲದಲ್ಲಿ ಸಾರಾಯಿ ಪಾಕೆಟಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆತನನ್ನು ರೇಡ ಮಾಡಿ ಹಿಡಿದು ಹೆಸರು ವಿಚಾರಿಸಲಾಗಿ ಸಂತೋಷ ರಾಮಪ್ಪ ರಾಠೋಡ ಎಂದು ಸಾ-ಚಿಕ್ಕೂರ ತಾಂಡಾ ನಂ.2 ಎಂದು ತಿಳಿಸಿದ ಎಂದರೆ ಸರಿಯಲ್ಲ. ಆತನ

ಬಳಿ ಇದ್ದ ಕೈ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ ತಲಾ 180 ಎಮ್.ಎಲ್ ಅಳತೆಯ ಒರಿಜಿನಲ ಚಾಯ್ಸ ಡಿಲಕ್ಸ ವಿಸ್ಕಿಯ 17 ಪಾಕೆಟಗಳು ಇದ್ದವು ಎಂದರೆ ಸರಿಯಲ್ಲ. ಅಂಗ ಜಪ್ತಿ ಮಾಡಿ ನೋಡಲಗಿ ರೂ.350/- ಗಳು ಸಿಕ್ಕವು ಎಂದರೆ ಸರಿಯಲ್ಲ. ಸದರಿ 17 ಪಾಕೆಟಗಳನ್ನು ಮತ್ತು ಹಣವನ್ನು ವಶಪಡಿಸಿಕೊಂಡು ಪಾಕೆಟಗಳನು ರಟ್ಟಿನ ಬಾಕ್ಸನಲ್ಲಿ ಹಾಕಿ ದಾರದಿಂದ ಕಟ್ಟಿ ಅವುಗಳ ಮೇಲೆ ಅರಗಿನಿಂದ ಸರಕಾರಿ ಸೀಲ್ ಹಾಕಿ ಅವುಗಳ ಮೇಲೆ ಚಾಸಾ-1, ನೀವು ಮತ್ತು ಚಾಸಾ-3 ರವರು ಸಹಿ ಮಾಡಿದ ಚೀಟಿಯನ್ನು ಅಂಟಿಸಿದರು ಎಂದರೆ ಸರಿಯಲ್ಲ. ಪಂಚನಾಮೆ ಕ್ರಮವನ್ನು ರಾತ್ರಿ 07-10 ರಿಂದ 08-10 ರವರೆಗೆ ನಿಮ್ಮ ಸಮಕ್ಷಮ ಬರೆದು ಸ್ಥಳದಲ್ಲಿಯೇ ನಿಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ಪೊಲೀಸರು ವಶಪಡಿಸಿಕೊಂಡ ಆರೋಪಿತ ಮತ್ತು ನ್ಯಾಯಾಲಯದ ಮುಂದಿರುವ ಮುಮಾ-1 ಮತ್ತು ಮುಮಾ-2 ಗಳನ್ನು ಪೊಲೀಸರು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಪಂಚನಾಮೆ ಜರುಗಿಸಿದರು ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.ವಿ.ಕೆ.ಎಸ್ ವಕೀಲರಿಂದ ಆರೋಪಿಯವರ ಪರವಾಗಿ**

**ಇಲ್ಲ.**

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

**ಸಹಿ/-**

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ